# ಕರ್ನಾಟಕ ಆಯವ್ಯಯ 2009 - 10

# ಪಕ್ಷಿನೋಟ

**2009–10 ರ ಆಯವ್ಯಯ ನೋಟ**

(ರೂ.ಕೋಟಿಗಳಲ್ಲಿ)

| | | |
|---|---|---|
| ➢ ಒಟ್ಟು ಅಂದಾಜು | : | 58031.36 |
| ➢ ರಾಜಸ್ವ ಸ್ವೀಕೃತಿಗಳು | : | 48389.04 |
| ➢ ಬಂಡವಾಳ ಸ್ವೀಕೃತಿಗಳು | : | 9642.32 |
| ➢ ರಾಜಸ್ವ ವೆಚ್ಚ | : | 47237.67 |
| ➢ ಬಂಡವಾಳ ವೆಚ್ಚ | : | 10879.57 |
| ➢ ಯೋಜನಾ ಅಂದಾಜು | : | 29500.00 |

- ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಆಂತರಿಕ ಮೂಲಗಳಿಂದ ಮತ್ತು ಸಾಲಗಳಿಂದ ರೂ. 6604 ಕೋಟಿಗಳನ್ನು ಸಂಗ್ರಹಿಸುವ ನಿರೀಕ್ಷೆ.
- ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿನ ವಿತ್ತೀಯ ಕೊರತೆಯ ಮಿತಿ 2008–09ರಲ್ಲಿ ಶೇ. 3.00ರಿಂದ ಶೇ. 3.5ಕ್ಕೆ ಹೆಚ್ಚಳ

**ಪ್ರಮುಖ ಅಭಿವೃದ್ಧಿ ಕ್ಷೇತ್ರಗಳಿಗೆ ಆದ್ಯತೆ**

- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳು, ಗ್ರಾಮೀಣಾಭಿವೃದ್ಧಿ, ನೀರಾವರಿ, ವಿದ್ಯುಚ್ಛಕ್ತಿ, ರಸ್ತೆಗಳು, ನಗರಾಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಆದ್ಯತೆ.
- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ 2,440 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ಗ್ರಾಮೀಣಾಭಿವೃದ್ಧಿಗೆ 3,063 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ನೀರಾವರಿ ಕಾಮಗಾರಿಗಳಿಗೆ 4,714 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ವಿದ್ಯುಚ್ಛಕ್ತಿ ವಲಯದ ಯೋಜನೆ ಮತ್ತು ಯೋಜನೇತರ ವೆಚ್ಚವನ್ನು 6,107 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.
- ಸಾರಿಗೆ ವಲಯದಲ್ಲಿ 1,327 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.
- ಬೆಂಗಳೂರು ನಗರವೂ ಸೇರಿದಂತೆ ನಗರಾಭಿವೃದ್ಧಿ ವಲಯದಲ್ಲಿನ ಖರ್ಚು ಅಂದಾಜು 7,376 ಕೋಟಿ ರೂ.ಗಳು.
- ಶಿಕ್ಷಣ ಕ್ಷೇತ್ರಕ್ಕಾಗಿ 8,888 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು.

## ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು

- ಸಹಕಾರಿ ಸಂಸ್ಥೆಗಳ ಜೊತೆಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ ಬ್ಯಾಂಕುಗಳಿಂದಲೂ ಶೇ.3ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಿಕೆ. ಇದಕ್ಕಾಗಿ 250 ಕೋಟಿ ರೂ. ಬಡ್ಡಿ ಸಹಾಯಧನ.
- ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಲು ಆವರ್ತ ನಿಧಿ ಮೊತ್ತ 500 ಕೋಟಿ ರೂ.ಗಳಿಂದ 750 ಕೋಟಿ ರೂ.ಗಳಿಗೆ ಹೆಚ್ಚಳ.
- ಸಾವಯವ ಕೃಷಿ ಪ್ರೋತ್ಸಾಹ ಧನ 100 ಕೋಟಿ ರೂ.ಗಳಿಂದ ರೂ.200 ಕೋಟಿಗೆ ಹೆಚ್ಚಳ.
- ರೈತರಿಗೆ ಶೇ.3ರ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ಸಾಲವನ್ನು ಪಡೆಯಲು ರೂ.150 ಕೋಟಿ ಸಹಾಯಧನ.
- ರಾಯಚೂರಿನ ಕೃಷಿ ವಿಶ್ವವಿದ್ಯಾನಿಲಯ ಮತ್ತು ಬಾಗಲಕೋಟೆ ಜಿಲ್ಲೆಯ ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ತಲಾ ರೂ.20 ಕೋಟಿ ಹಣಕಾಸಿನ ಸೌಲಭ್ಯ.
- ರೈತರು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುವ ಸಲುವಾಗಿ ವಿದೇಶಗಳಲ್ಲಿ ಅಧ್ಯಯನ ಪ್ರವಾಸಕ್ಕೆ 1000 ಜನರಿಗೆ ಪ್ರವಾಸದ ಅವಕಾಶ ಕಲ್ಪನೆ.
- ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿಯಲ್ಲಿ ಖಾಸಗಿ ಸಹಭಾಗಿತ್ವದೊಡನೆ ರೂ.100 ಕೋಟಿ ವೆಚ್ಚದಲ್ಲಿ ಬೆಳಗಾವಿಯಲ್ಲಿ ತೋಟಗಾರಿಕಾ ಉತ್ಪನ್ನ ಮಾರುಕಟ್ಟೆ ಸ್ಥಾಪನೆ.
- ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆ ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕ ಹಾಗೂ ಶೈತ್ಯಾಗಾರಗಳ ನಿರ್ಮಾಣಕ್ಕಾಗಿ ರೂ.10 ಕೋಟಿ.
- ಕೋಲಾರ ಜಿಲ್ಲೆಯಲ್ಲಿ ನೂತನ ತೋಟಗಾರಿಕೆ ಕಾಲೇಜು ಸ್ಥಾಪನೆಗೆ ರೂ.5 ಕೋಟಿ.
- ರೈತರಿಗೆ ಪಂಪ್ ಸೆಟ್‌ಗಳಿಗೆ ವಿದ್ಯುತ್ ನೀಡಲು ಸಹಾಯಧನ ರೂ.2100 ಕೋಟಿ.

## ಜಲಸಂಪನ್ಮೂಲ ಮತ್ತು ನೀರಾವರಿ

- ನೀರಾವರಿ ಯೋಜನೆಗಳ ಅನುದಾನ 4,714 ಕೋಟಿ ರೂ.ಗಳಿಗೆ ಹೆಚ್ಚಳ.
- ಭದ್ರಾ ಮೇಲ್ದಂಡೆ ಯೋಜನೆಗೆ ಈ ವರ್ಷ 500 ಕೋಟಿ ರೂ. ಹಂಚಿಕೆ.
- ಈ ವರ್ಷ 63,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಸಂಕಲ್ಪ.
- ರೂ. 2193 ಕೋಟಿಯ ಬಿಜಾಪುರ ಜಿಲ್ಲೆಯ ಚಿಮ್ಮಲಗಿ ಏತನೀರಾವರಿ ಬೃಹತ್ ಯೋಜನೆಯ ಅನುಷ್ಠಾನದ ಪ್ರಾರಂಭ.

- ಬಿಜಾಪುರ ಜಿಲ್ಲೆಯ ಗುತ್ತಿಬಸವಣ್ಣ ಏತನೀರಾವರಿ ಯೋಜನೆಯ 2ನೇ ಹಂತಕ್ಕೆ ರೂ.120 ಕೋಟಿ ವೆಚ್ಚ.
- ನೀರಾವರಿ ಕೆರೆಗಳ ಹಾಗೂ ಏತನೀರಾವರಿ ಯೋಜನೆಗಳ ಅಭಿವೃದ್ಧಿಗಾಗಿ ರಾಜ್ಯದ ಎಲ್ಲಾ ಕೆರೆಗಳ ಸಮಗ್ರ ಸಮೀಕ್ಷೆ ಹಾಗೂ ಪುನರುಜ್ಜೀವನಕ್ಕೆ ಇಸ್ರೋ (ISRO) ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ದೂರಸಂವೇದನೆ ಅಳವಡಿಕೆ ಕೇಂದ್ರ (KSRAC)ದ ಮೂಲಕ ವಿಶೇಷ ಪ್ರಯತ್ನವಾಗಿ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗೆ ರೂ. 764 ಕೋಟಿ ಅನುದಾನ.

## ಗ್ರಾಮೀಣಾಭಿವೃದ್ಧಿ

- ಸುವರ್ಣ ಗ್ರಾಮೋದಯ ಯೋಜನೆಯಡಿ 1,200 ಗ್ರಾಮಗಳ ಅಭಿವೃದ್ಧಿಗಾಗಿ ಮೊದಲ ಹಂತದಲ್ಲಿ ರೂ.300 ಕೋಟಿ ಅನುದಾನ.
- 2008–09ನೇ ಸಾಲಿನಲ್ಲಿ 1124 ಕಿ.ಮೀ. ರಸ್ತೆಯ ಅಭಿವೃದ್ಧಿಗೆ ರೂ.325 ಕೋಟಿ ವಿನಿಯೋಗ.
- ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅಡಿಯಲ್ಲಿ ಈವರೆಗೆ 7880 ಕಿಲೋಮೀಟರ್‌ಗಳ ರಸ್ತೆಯನ್ನು ನಿರ್ಮಾಣ.
- 2500 ಕಿಲೋಮೀಟರ್ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರೂ.800 ಕೋಟಿ ಅನುದಾನ.
- ಗ್ರಾಮೀಣ ರಸ್ತೆಗಳನ್ನು ಉತ್ತಮಪಡಿಸಲು ವಾರ್ಷಿಕ ಪಾವತಿ (Annuity) ಆಧಾರದ ಮೇಲೆ ಖಾಸಗಿ ಸಹಭಾಗಿತ್ವದೊಡನೆ ರೂ.5000 ಕೋಟಿಗಳ ಯೋಜನೆ.
- ಮಲೆನಾಡು ಪ್ರದೇಶದ ಗ್ರಾಮಗಳಿಗೆ ಸಂಪರ್ಕ ಕಲ್ಪನೆಗೆ 500 ಕಾಲು ಸಂಕಗಳ ಹಾಗೂ ತೂಗು ಸೇತುವೆಗಳ ನಿರ್ಮಾಣಕ್ಕೆ ರೂ.25 ಕೋಟಿ.

## ನಗರಾಭಿವೃದ್ಧಿ

- ಬೆಂಗಳೂರು ನಗರಾಭಿವೃದ್ಧಿಗೆ 3,000 ಕೋಟಿ ರೂ.
- ನಗರಪಾಲಿಕೆಗಳ ಹೊರತಾಗಿ ಇತರ ಜಿಲ್ಲಾ ಕೇಂದ್ರಗಳು ಹಾಗೂ ನಗರಪಾಲಿಕೆಗಳಿರುವ ಇತರ ನಗರಗಳ ಅಭಿವೃದ್ಧಿಗೆ ತಲಾ ರೂ.15 ಕೋಟಿಯ ವಿಶೇಷ ಅನುದಾನ. ತಾಲ್ಲೂಕು ಕೇಂದ್ರಗಳು ಮತ್ತು ಪುರಸಭೆಗಳಿರುವ ಇತರ ಸಣ್ಣ ಪಟ್ಟಣಗಳಿಗೆ ಪ್ರತಿ ಪಟ್ಟಣಕ್ಕೆ ರೂ.5 ಕೋಟಿಯಂತೆ ಮತ್ತು ಪಟ್ಟಣ ಪಂಚಾಯತಿಗಳಿರುವ ಇತರ ನಗರ ಪ್ರದೇಶಗಳಿಗೆ ರೂ.2 ಕೋಟಿ ವಿಶೇಷ ಅನುದಾನ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂ.1000 ಕೋಟಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.500 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿ ಪ್ರಮುಖ ರಸ್ತೆಗಳನ್ನು ಉತ್ತಮ ದರ್ಜೆಗೇರಿಸಿ ಖಾಸಗೀ ಸಹಭಾಗಿತ್ವದಿಂದ ನಿರ್ವಹಣೆ ಮಾಡಲು ರೂ.2000 ಕೋಟಿಯ ವಿಶೇಷ ಯೋಜನೆಯ ಅನುಷ್ಠಾನ.
- ಬೆಂಗಳೂರು ಮಹಾ ನಗರಕ್ಕೆ ಕುಡಿಯುವ ನೀರಿನ ಸರಬರಾಜನ್ನು ಹೆಚ್ಚಿಸಲು ರೂ.600 ಕೋಟಿ.
- ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಶುದ್ಧೀಕರಿಸಿದ ಒಳಚರಂಡಿ ನೀರಿನ ಸರಬರಾಜನ್ನು ಕಲ್ಪಿಸಲು ರೂ.100 ಕೋಟಿ.
- ಮೆಟ್ರೊ ಸಂಸ್ಥೆಗೆ ರಾಜ್ಯ ಸರ್ಕಾರದ ಪಾಲಿನ ಬಂಡವಾಳವಾಗಿ ರೂ.600 ಕೋಟಿ.
- ಕನಿಷ್ಠ 1000 ಉತ್ತಮ ದರ್ಜೆಯ ನಗರ ಸಾರಿಗೆ ಬಸ್‌ಗಳ ಸಂಚಾರವನ್ನು ಪ್ರಾರಂಭಿಸಲು ರೂ.500 ಕೋಟಿ.
- ಬೆಳಗಾವಿ ಮತ್ತು ಬಳ್ಳಾರಿ ನಗರಗಳಿಗೆ ಖಾಸಗಿ ಸಹಭಾಗಿತ್ವದಲ್ಲಿ ವರ್ತುಲ ರಸ್ತೆ ಸೌಲಭ್ಯ. ಬೆಳಗಾವಿ ನಗರದ ಒಳಚರಂಡಿ ವ್ಯವಸ್ಥೆಯ ನವೀಕರಣಕ್ಕೆ ರೂ.120 ಕೋಟಿ.
- ಕೊಳಚೆ ಪ್ರದೇಶಗಳ ನಿವಾಸಿಗಳಿಗೆ 10,000 ಮನೆಗಳ ನಿರ್ಮಾಣ.

## ಮೂಲಭೂತ ಸೌಕರ್ಯಗಳ ಅಭಿವೃದ್ಧಿ

- ರಾಜ್ಯ ಹೆದ್ದಾರಿ ಮತ್ತು ಮುಖ್ಯ ರಸ್ತೆಗಳ 10,000 ಕಿ.ಮೀ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 12,600 ಕಿ.ಮೀ. ರಸ್ತೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕಾಗಿ ಕರ್ನಾಟಕ ರಸ್ತೆ ನಿಧಿಯನ್ನು ಸ್ಥಾಪಿಸಲು ಕೆ.ಆರ್.ಡಿ.ಸಿ.ಎಲ್. ಸಂಸ್ಥೆಗೆ ರೂ.500 ಕೋಟಿ ಬಂಡವಾಳ ಅನುದಾನ.
- ವಿಶ್ವ ಬ್ಯಾಂಕ್ ನೆರವಿನಿಂದ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2ರಲ್ಲಿ 3400 ಕಿ.ಮೀ. ಉದ್ದದ ಹೆದ್ದಾರಿಗಳ ಅಭಿವೃದ್ಧಿಗೆ ರೂ.380 ಕೋಟಿ.
- ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.400 ಕೋಟಿಗಳ ವೆಚ್ಚದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿ. ನಬಾರ್ಡ್ ನೆರವಿನಿಂದ ರಸ್ತೆ ಹಾಗೂ ಸೇತುವೆ ಕಾಮಗಾರಿಗಾಗಿ ರೂ.230 ಕೋಟಿ.

## ರೈಲ್ವೆ ಮಾರ್ಗಗಳ ವಿಸ್ತರಣೆ

- ನೂತನ ರೈಲ್ವೆ ಯೋಜನೆಗಳಾದ ಧಾರವಾಡ-ಬೆಳಗಾವಿ ನೇರ ಸಂಪರ್ಕ ಕುಡಚಿ-ಬಾಗಲಕೋಟೆ, ಗದಗ-ಹಾವೇರಿ, ಆಲಮಟ್ಟಿ-ಕೊಪ್ಪಳ ಯೋಜನೆಗಳಿಗೆ ಚಾಲನೆ ನೀಡಲು ರಾಜ್ಯ ಸರ್ಕಾರದಿಂದ ಶೇ. 50 ಪಾಲು ಹಣ.

- ಬೆಂಗಳೂರು ನಗರದಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅತಿ ವೇಗದ ರೈಲಿನ ಸಂಪರ್ಕವನ್ನು ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲು ಕೆ.ಎಸ್.ಐ.ಐ.ಡಿ.ಸಿ. ಮೂಲಕ ಸೂಕ್ತ ಕ್ರಮ.

**ಬಂದರುಗಳ ಅಭಿವೃದ್ಧಿ**

- ರಾಜ್ಯದಲ್ಲಿ ಬಂದರುಗಳನ್ನು ಅಭಿವೃದ್ಧಿಪಡಿಸಲು 'ಕರ್ನಾಟಕ ಮ್ಯಾರಿಟೈಮ್ ಬೋರ್ಡ್' ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ರಾಜ್ಯದ ಪಶ್ಚಿಮ ಕರಾವಳಿಯಲ್ಲಿ ಕಾರವಾರ, ತದಡಿ, ಹೊನ್ನಾವರ, ಮಲ್ಪೆ, ಹಳೆ ಮಂಗಳೂರು ಮುಂತಾದ ಕಡೆಗಳಲ್ಲಿ ಉತ್ತಮ ಬಂದರುಗಳ ನಿರ್ಮಾಣವನ್ನು ಖಾಸಗಿ ಸಹಭಾಗಿತ್ವದೊಡನೆ ಕೈಗೊಳ್ಳಲು ರೂ.100 ಕೋಟಿ ಅನುದಾನ.
- ಕಾರವಾರ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿಗೆ ರೂ.10 ಕೋಟಿ.

**ವಿಮಾನ ನಿಲ್ದಾಣಗಳು**

- ಗುಲ್ಬರ್ಗ, ಬಿಜಾಪುರ, ಶಿವಮೊಗ್ಗ, ಹುಬ್ಬಳ್ಳಿ, ಬಳ್ಳಾರಿ ಹಾಗೂ ಮೈಸೂರು ನಗರಗಳಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ ಹಾಗೂ ಅಭಿವೃದ್ಧಿಗಾಗಿ ರೂ.100 ಕೋಟಿ.

**ವಿದ್ಯುತ್ ಉತ್ಪಾದನೆಗೆ ವಿವಿಧ ಯೋಜನೆಗಳು**

- ಉಡುಪಿಯಲ್ಲಿ 1015 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗಾಗಿ ಮತ್ತು ಗುಲ್ಬರ್ಗ ಹಾಗೂ ಹಿಡಕಲ್‌ನಲ್ಲಿ ನೂತನ ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಕ್ರಮ.
- ಸಾರ್ವಜನಿಕ ಹಾಗೂ ಜಂಟಿ ವಲಯದ ವಿವಿಧ ವಿದ್ಯುತ್ ಉತ್ಪಾದನೆ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ವಿದ್ಯುತ್ ನಿಗಮಕ್ಕೆ ರೂ.500 ಕೋಟಿ ಹೆಚ್ಚುವರಿ ಬಂಡವಾಳ.
- ಮಾಲೂರು ತಾಲ್ಲೂಕಿನಲ್ಲಿ ಪ್ರಾರಂಭಿಸಲಾದ ನಿರಂತರ ಜ್ಯೋತಿ ಯೋಜನೆ ಇತರ ಹಿಂದುಳಿದ ತಾಲ್ಲೂಕುಗಳಿಗೆ ಹಂತ ಹಂತವಾಗಿ ವಿಸ್ತರಣೆ.
- ರಾಜ್ಯದಲ್ಲಿನ ಎಲ್ಲಾ ಗುಡಿಸಲು ವಾಸಿಗಳಿಗೆ ಹಾಗೂ ತಾಂಡಾಗಳಿಗೆ ವಿದ್ಯುಚ್ಛಕ್ತಿ ಸರಬರಾಜು. ಗಂಗಾಕಲ್ಯಾಣ ಯೋಜನೆಯಡಿ 10000 ಬಡಕುಟುಂಬಗಳ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುದೀಕರಣ ಮಾಡಲು ರೂ.100 ಕೋಟಿ.

**ಸಮಾಜ ಕಲ್ಯಾಣ**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ, ಶಿಕ್ಷಣ ಸೌಕರ್ಯ ಮುಂತಾದ ವೆಚ್ಚಗಳಿಗಾಗಿ ಕ್ರೋಢೀಕೃತ ಅನುದಾನದ (Pooled Fund) ಮೊತ್ತದಲ್ಲಿ ರೂ.200 ಕೋಟಿ ಯಿಂದ ರೂ.600 ಕೋಟಿಗೆ ಹೆಚ್ಚಳ.

- ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳಲ್ಲಿರುವ ನಿಲಯಾರ್ಥಿಗಳ ಭೋಜನಾ ವೆಚ್ಚ ಪ್ರತಿ ತಿಂಗಳಿಗೆ ರೂ.350 ರಿಂದ ರೂ.500ಕ್ಕೆ ಹೆಚ್ಚಳ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ 114 'ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ'ಗಳನ್ನು ತೆರೆಯಲು ರೂ.100 ಕೋಟಿ ಅನುದಾನ.
- 10ನೇ ತರಗತಿಯಲ್ಲಿ ಶೇ.75ಕ್ಕಿಂತಲೂ ಹೆಚ್ಚು ಅಂಕಗಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಣ್ಣುಮಕ್ಕಳಿಗೆ ರೂ.10,000 ಮತ್ತು ಶೇ.60ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳಿಗೆ ರೂ.5,000 ಪ್ರೋತ್ಸಾಹ ಧನ.
- ವಿದ್ಯಾರ್ಥಿನಿಲಯಗಳಲ್ಲಿ ನಿಲಯಾರ್ಥಿಗಳ ಸಂಖ್ಯೆಯನ್ನು ಶೇ.50 ರಷ್ಟು ಹೆಚ್ಚಿಸಲಾಗುವುದು ಹಾಗೂ ಅವರಿಗೆ ಕಂಪ್ಯೂಟರ್ ತರಬೇತಿ, ಭಾಷಾಜ್ಞಾನ ಹಾಗೂ ಗಣಿತ ವಿಷಯಗಳಲ್ಲಿ ವಿಶೇಷ ಶಿಕ್ಷಣದ ವ್ಯವಸ್ಥೆ ಮಾಡಲು ರೂ.20 ಕೋಟಿ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳ ಅಭಿವೃದ್ಧಿಗೆ ರೂ.150 ಕೋಟಿ
- ಲಿಡ್ಕರ್ ಸಂಸ್ಥೆಯನ್ನು ಜಗಜೀವನರಾಮ್ ಅಭಿವೃದ್ಧಿ ನಿಗಮವೆಂದು ಪುನರ್ ನಾಮಕರಣ ಹಾಗೂ ಚರ್ಮಕೈಗಾರಿಕೆಯನ್ನು ಅವಲಂಭಿಸಿರುವ ಕುಟುಂಬಗಳಿಗೆ ತಾಂತ್ರಿಕ ಸಹಾಯ ಹಾಗೂ ಮಾರುಕಟ್ಟೆ ಅವಕಾಶ ಕಲ್ಪನೆಗೆ ರೂ.5 ಕೋಟಿ.
- ಬೆಂಗಳೂರು ನಗರದಲ್ಲಿ ಜಗಜೀವನರಾಮ್ ಸ್ಮಾರಕ ಭವನ ನಿರ್ಮಾಣಕ್ಕೆ ರೂ.5 ಕೋಟಿ ಅನುದಾನ.
- ಬಂಜಾರ ತಾಂಡಾಗಳನ್ನು ಕಂದಾಯಗ್ರಾಮಗಳಾಗಿ ಪರಿವರ್ತಿಸಲು ನಿಯಮಗಳ ರಚನೆ. ಹಾಗೂ 200 ಲಂಬಾಣಿ ತಾಂಡಾಗಳಲ್ಲಿ ಸೇವಾಲಾಲ್ ಸಮುದಾಯ ಭವನಗಳ ನಿರ್ಮಾಣಕ್ಕೆ ರೂ.10 ಲಕ್ಷ ಧನಸಹಾಯ.
- ಗುಲ್ಬರ್ಗ, ಬಿಜಾಪುರ, ಹಾವೇರಿ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಬಂಜಾರ ಭವನಗಳ ನಿರ್ಮಾಣಕ್ಕೆ ರೂ.10 ಕೋಟಿ.
- 500 ಬಂಜಾರ ತಾಂಡಾಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.50 ಕೋಟಿ.
- ಗೊಲ್ಲರ ಹಟ್ಟಿಗಳ ಅಭಿವೃದ್ಧಿಗಾಗಿ ರೂ.5 ಕೋಟಿ
- ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ರೂ.50 ಕೋಟಿ.
- ವಿಶ್ವಕರ್ಮ, ಕ್ಷತ್ರಿಯ, ಉಪ್ಪಾರ, ಸವಿತಾ, ಕುರುಬ, ಮಡಿವಾಳ, ದೇವಾಂಗ, ಬಿಲ್ಲವ, ಮುಂತಾದ ಸಮಾಜಗಳ ಸಂಘಟನೆಗಳಿಗೆ ಮೂಲಭೂತ ಸೌಲಭ್ಯಕ್ಕೆ ರೂ.20 ಕೋಟಿ.

- ಕಮ್ಮಾರ, ಕುಂಬಾರ, ಬಡಿಗ, ದೇವಾಂಗ, ಮೂರ್ತೆದಾರ, ಅಕ್ಕಸಾಲಿಗ, ದರ್ಜಿ, ಕ್ಷೌರಿಕ, ಮುಂತಾದುವುಗಳಲ್ಲಿ ನಿರತರಾದ ಒಂದು ಲಕ್ಷ ಕುಟುಂಬಗಳಿಗೆ ದೇವರಾಜ ಅರಸ್ ಅಭಿವೃದ್ಧಿ ನಿಗಮದ ಮೂಲಕ ರೂ.5,000ದವರೆಗೆ ಸಾಲ ಹಾಗೂ ರೂ.5,000 ಸಹಾಯಧನಕ್ಕೆ ರೂ.50 ಕೋಟಿ.
- ಅಲ್ಪಸಂಖ್ಯಾತರಿಗಾಗಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ರೂ.35 ಕೋಟಿ ಹಾಗೂ ಶಾದಿ ಮಹಲ್‌ಗಳ ನಿರ್ಮಾಣಕ್ಕೆ ರೂ.15 ಕೋಟಿ.
- ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರೂ.5 ಕೋಟಿ.
- ಬೆಂಗಳೂರಿನಲ್ಲಿ ಹಜ್ ಭವನ ನಿರ್ಮಾಣಕ್ಕೆ ರೂ.5 ಕೋಟಿ.
- ಕ್ರೈಸ್ತ, ಬೌದ್ಧ, ಜೈನ, ಸಿಖ್, ಮುಂತಾದ ಅಲ್ಪಸಂಖ್ಯಾತರ ಸಂಸ್ಥೆಗಳ ಚಟುವಟಿಕೆಗಳಿಗಾಗಿ ರೂ.10 ಕೋಟಿ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

- ದೇವದಾಸಿ ಮಹಿಳೆಯರಿಗಾಗಿ 5,000 ಮನೆಗಳ ನಿರ್ಮಾಣಕ್ಕೆ ರೂ.20 ಕೋಟಿ.
- ಪ್ರತಿ ತಾಲ್ಲೂಕಿನಲ್ಲಿ ಮಾರಾಟ ಕೇಂದ್ರಗಳನ್ನು ಒಳಗೊಂಡ ಸ್ತ್ರೀಶಕ್ತಿ ಸಂಕೀರ್ಣಗಳ ನಿರ್ಮಾಣಕ್ಕೆ ರೂ.10 ಲಕ್ಷ ಅನುದಾನ.
- 50 ವರ್ಷಕ್ಕೂ ಮೇಲ್ಪಟ್ಟ ನಿರಾಶ್ರಿತ ಮಹಿಳೆಯರಿಗೆ ರೂ.400 ಮಾಸಾಶನ.

**ವಸತಿ ಇಲಾಖೆ**

- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಸುಮಾರು ರೂ.1200 ಕೋಟಿ ವೆಚ್ಚದಲ್ಲಿ ಆಶ್ರಯ ಯೋಜನೆಯಡಿ 3 ಲಕ್ಷ ಮನೆಗಳು ಮತ್ತು ಇಂದಿರಾ ಆವಾಸ್ ಯೋಜನೆಯಡಿ 1 ಲಕ್ಷ ಮನೆಗಳ ನಿರ್ಮಾಣ.
- ಆಶ್ರಯ, ಅಂಬೇಡ್ಕರ್ ಆವಾಸ್ ಮುಂತಾದ ಯೋಜನೆಗಳಲ್ಲಿ ವಸತಿಹೀನರಿಗಾಗಿ ಒಂದು ಲಕ್ಷ ನಿವೇಶನಗಳ ಅಭಿವೃದ್ಧಿಗಾಗಿ ರೂ.100 ಕೋಟಿ.

**ಕೌಶಲ್ಯ ತರಬೇತಿಗೆ ಸಹಾಯಧನ**

- ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.100 ಕೋಟಿ ಅನುದಾನ.
- ಕೈಗಾರಿಕಾ ತರಬೇತಿ ಸಂಸ್ಥೆಗಳು, ವಿದ್ಯಾಸಂಸ್ಥೆಗಳು ಮತ್ತು ಕೈಗಾರಿಕಾ ಘಟಕಗಳು ವಿಶೇಷ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ತಲಾ ರೂ.3000 ದಿಂದ ರೂ.10000ದವರೆಗೆ ತರಬೇತಿ ಸಹಾಯಧನ.
- ಪ.ಜಾ:ಪ.ಪಂ. ಹಾಗೂ ಹಿಂದುಳಿದ ವರ್ಗಗಳ/ಅಲ್ಪಸಂಖ್ಯಾತರ ಇಲಾಖೆಗಳಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ.
- ಪ್ರತಿಯೊಂದು ಜಿಲ್ಲೆಯಲ್ಲಿ ಸಿದ್ಧ ಉಡುಪು ಕೈಗಾರಿಕೆಗಳಲ್ಲಿ ಕೆಲಸ ಮಾಡಲು ವಿಶೇಷ ತರಬೇತಿ ಕೇಂದ್ರಗಳ ಸ್ಥಾಪನೆಗೆ ರೂ.15 ಕೋಟಿ.

**ಆಹಾರ – ಪಡಿತರ ವ್ಯವಸ್ಥೆಗೆ ರೂ.750 ಕೋಟಿ**

- ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಅಗತ್ಯ ವಸ್ತುಗಳನ್ನು ಬಡಕುಟುಂಬಗಳಿಗೆ ವಿತರಿಸಲು ರೂ.750 ಕೋಟಿ ಸಹಾಯಧನ.

**ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ**

- ಮೈಶುಗರ್ ಕಂಪನಿಗೆ 50 ಕೋಟಿ ರೂ.ಗಳ ಇಕ್ವಿಟಿ ಬಂಡವಾಳ.
- ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ರೂ.1000 ಕೋಟಿ.
- ಖಾಸಗಿ ಸಹಭಾಗಿತ್ವದೊಡನೆ ಹತ್ತು ಸಿದ್ಧ ಉಡುಪುಗಳ ಸಮುಚ್ಚಯಗಳನ್ನು (Apparel Clusters) ಗುಲ್ಬರ್ಗ, ಬಳ್ಳಾರಿ, ಹುಬ್ಬಳ್ಳಿ, ಬೆಳಗಾವಿ, ಬಾಗಲಕೋಟೆ, ಶಿವಮೊಗ್ಗ, ದಾವಣಗೆರೆ, ಮೈಸೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರದಲ್ಲಿ ಸ್ಥಾಪಿಸಲು ರೂ.80 ಕೋಟಿ.

**ನೇಕಾರರಿಗೆ ನೆರವು**

- ಬಡ ನೇಕಾರರಿಗೆ 5000 ಮಗ್ಗದ ಕೋಣೆಯುಳ್ಳ ಮನೆಗಳ ನಿರ್ಮಾಣಕ್ಕೆ ತಲಾ 60,000 ರೂ. ನೆರವು.
- ನೇಕಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲದ ಯೋಜನೆಯ ಮುಂದುವರಿಕೆ.

**ಪಶುಸಂಗೋಪನೆ ಮತ್ತು ಹೈನುಗಾರಿಕೆ**

- ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ರೈತ ಕುಟುಂಬಗಳಿಗೆ ಪ್ರತಿಲೀಟರ್ ಹಾಲಿಗೆ ರೂ.2ರಂತೆ ಸಹಾಯಧನ ನೀಡಲು ರೂ.200 ಕೋಟಿ.
- ಕುರಿ/ಮೇಕೆ ಸಾಕಾಣಿಕೆದಾರರು ರಚಿಸುವ ಗುಂಪುಗಳಿಗೆ ವೈಜ್ಞಾನಿಕ ರೀತಿಯ ಪಶುಪಾಲನಾ ಕ್ರಮಗಳನ್ನು ಅನುಸರಿಸಲು ಅವರ ಪಶುಸಂಪತ್ತಿಗೆ ವಿಮೆ ಸೌಲಭ್ಯಕ್ಕೆ ರೂ.5 ಕೋಟಿ.
- ಪ್ರತಿ ತಾಲ್ಲೂಕಿನಲ್ಲಿ ಗೋಸಂರಕ್ಷಣೆಗಾಗಿ ಗೋಶಾಲೆಗಳನ್ನು ಸ್ಥಾಪಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ರೂ.10 ಲಕ್ಷದವರೆಗೆ ಅನುದಾನ.
- ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 1000 ನೂತನ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲು ರೂ.5 ಕೋಟಿ ಸಹಾಯಧನ.
- ಗುಲ್ಬರ್ಗ ಹಾಗೂ ಬೆಳಗಾವಿ ವಿಭಾಗಗಳಲ್ಲಿ ಹಾಲಿನ ಶೀತಲೀಕರಣ ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ.
- ಚಿಕ್ಕಮಗಳೂರು ಜಿಲ್ಲೆಯ ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾನಿಲಯಕ್ಕೆ ಅಮೃತಮಹಲ್ ಕಾವಲು ಜಮೀನುಗಳನ್ನು ಅಭಿವೃದ್ಧಿಪಡಿಸಿ ಪಶುಸಂಗೋಪನೆ ಹಾಗೂ ಸಂಶೋಧನೆಗೆ ರೂ.10 ಕೋಟಿ

**ಮೀನುಗಾರಿಕೆ**

- ಮೀನುಗಾರರ ಆರ್ಥಿಕ ಬೆಂಬಲಕ್ಕೆ 2000 ಸ್ವಸಹಾಯ ಗುಂಪುಗಳ ರಚಿಸಿ 50,000 ರೂ. ಸಾಲ ಮತ್ತು 10,000 ರೂ. ಬೀಜ ಬಂಡವಾಳ ವಿತರಣೆ.
- ಮೀನುಗಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ.

**ಕೃಷಿ ಮಾರುಕಟ್ಟೆ**

- ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಲ ರೂ.750 ಕೋಟಿಗಳ ಅಗತ್ಯ ನಿಧಿ.
- ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯಲ್ಲಿ ಈರುಳ್ಳಿ, ಆಲೂಗಡ್ಡೆ ಮುಂತಾದ ಉತ್ಪನ್ನಗಳಿಗಾಗಿ ರೂ.100 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಮಾರುಕಟ್ಟೆಯ ನಿರ್ಮಾಣ.
- ಬೆಂಗಳೂರು ಬಳ್ಳಾರಿ ರಸ್ತೆಯಲ್ಲಿರುವ ಬ್ಯಾಟರಾಯನಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸುಸಜ್ಜಿತ ತರಕಾರಿ ಸಗಟು ಮಾರುಕಟ್ಟೆಯ ಸ್ಥಾಪನೆ.

**ಶಾಶ್ವತ ನೀರು ಸರಬರಾಜು ಯೋಜನೆಗಳ ಪರಿಕಲ್ಪನೆ**

- ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗೆ ಬಿಜಾಪುರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಾರಂಭಿಕ ಯೋಜನೆಗೆ ರೂ.100 ಕೋಟಿ. ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ನಿರ್ಮಾಣಕ್ಕಾಗಿ ಒಟ್ಟಾರೆ ರೂ.800 ಕೋಟಿ.
- ಗ್ರಾಮೀಣ ನೈರ್ಮಲ್ಯದ ಆಂದೋಲನದಲ್ಲಿ ಉತ್ತಮ ಸಾಧನೆಯನ್ನು ತೋರುವ ಗ್ರಾಮ, ತಾಲ್ಲೂಕು, ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲು ರೂ.5 ಕೋಟಿ.
- "ಸೌರ ಬೆಳಕು" – ಗ್ರಾಮಗಳಲ್ಲಿ ಸೌರ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸಲು ರೂ.5 ಕೋಟಿ.
- ರೂ.10 ಲಕ್ಷದ ಅಂದಾಜಿನಲ್ಲಿ ಪಂಚಾಯತಿ ಕಾರ್ಯಾಲಯದ ನಿರ್ಮಾಣಕ್ಕಾಗಿ ಗ್ರಾಮ ಪಂಚಾಯತಿಗಳಿಗೆ ಶೇ.50 ರಷ್ಟು ಅನುದಾನ.

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

- ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಅಗತ್ಯವಿರುವ ಶಿಕ್ಷಕರ ಹುದ್ದೆಯ ಭರ್ತಿ.
- ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಸಹಯೋಗದೊಂದಿಗೆ ರಾಜ್ಯದ ಹಿಂದುಳಿದ ಶಿಕ್ಷಣ ವಲಯಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ 114 ಕೇಂದ್ರೀಯ ವಿದ್ಯಾಲಯ ಮಾದರಿಯ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ಪ್ರಾರಂಭ.

- ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅಂದಾಜು 35 ಕೋಟಿ ಅನುದಾನ.

**ಉನ್ನತ ಶಿಕ್ಷಣ**

- ತುಮಕೂರು ವಿಶ್ವವಿದ್ಯಾನಿಲಯ ಮತ್ತು ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯಗಳ ಮೂಲ ಸೌಲಭ್ಯಗಳಿಗಾಗಿ ರೂ.10 ಕೋಟಿ ಅನುದಾನ.
- ತುಮಕೂರು ವಿಶ್ವವಿದ್ಯಾನಿಲಯುವನ್ನು ಡಾ॥ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾನಿಲಯವೆಂದು ಪುನರ್‌ನಾಮಕರಣ.
- ಕೊಡಗಿನ ಕುಶಾಲನಗರದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಸ್ಥಾಪನೆಗೆ ರೂ.2 ಕೋಟಿ.
- ಪ್ರತ್ಯೇಕ ಆಯುರ್ವೇದ ವೈದ್ಯ ವಿಶ್ವವಿದ್ಯಾನಿಲಯದ ಸ್ಥಾಪನೆ.
- ದಾವಣಗೆರೆಯಲ್ಲಿ ನೂತನ ವಿಶ್ವವಿದ್ಯಾನಿಲಯ ಸ್ಥಾಪನೆಗೆ ರೂ.10 ಕೋಟಿ.
- ಗಂಗಾವತಿಯಲ್ಲಿ ನೂತನ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ರೂ.10 ಕೋಟಿ.
- ಬೆಂಗಳೂರಿನ ಸಂಸ್ಕೃತ–ವೇದ ವಿಶ್ವವಿದ್ಯಾಲಯದ ಸ್ಥಾಪನೆಗೆ ಮತ್ತು ಮೈಸೂರಿನಲ್ಲಿ ಸಂಗೀತ ಮತ್ತು ಲಲಿತ ಕಲೆಗಳ ವಿಶ್ವವಿದ್ಯಾಲಯದ ಪ್ರಾರಂಭಕ್ಕೆ ಹಾಗೂ ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನಾ ಮತ್ತು ಅಕಾಡೆಮಿ ಕೇಂದ್ರದ ಅಭಿವೃದ್ಧಿಗೆ ತಲಾ ರೂ.5 ಕೋಟಿ ಸಹಾಯಧನ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**

- **'ಆರೋಗ್ಯ ಕವಚ'** ಯೋಜನೆಯ ಅಡಿಯಲ್ಲಿ ರೂ. 221.25 ಕೋಟಿಗಳ ವೆಚ್ಚದಲ್ಲಿ 517 ಆಂಬುಲೆನ್ಸ್‌ಗಳ ಪೂರೈಕೆ. ಬಡಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ.
- ಗುಲ್ಬರ್ಗ ವಿಭಾಗದ ಹಿಂದುಳಿದ ಜಿಲ್ಲೆಗಳಲ್ಲಿ **'ಸುವರ್ಣ ಆರೋಗ್ಯ ಸುರಕ್ಷಾ'** ಯೋಜನೆಯ ಮೂಲಕ 16 ಲಕ್ಷ ಬಡ ಕುಟುಂಬಗಳಿಗೆ ತಲಾ ರೂ.1.50 ಲಕ್ಷದವರೆಗೆ ಉಚಿತ ವೈದ್ಯಕೀಯ ನೆರವು.
- ಧಾರವಾಡದಲ್ಲಿ ಮಾನಸಿಕ ರೋಗಗಳ ಆಸ್ಪತ್ರೆ ಸ್ವಾಯುತ್ತ ಸಂಸ್ಥೆಯಾಗಿ ಪರಿವರ್ತನೆ ಹಾಗೂ ಅದರ ಉನ್ನತೀಕರಣಕ್ಕೆ ರೂ.10 ಕೋಟಿ.
- ಬೆಳಗಾವಿಯ ಸಾರ್ವಜನಿಕ ಆಸ್ಪತ್ರೆ ಮತ್ತು ಬೀದರ್ ಸಾರ್ವಜನಿಕ ಆಸ್ಪತ್ರೆಗಳಲ್ಲಿ 250 ಹೆಚ್ಚುವರಿ ಹಾಸಿಗೆಗಳ ಸೌಲಭ್ಯ ಹಾಗೂ ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯ ಉನ್ನತೀಕರಣ.
- ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರ ಪೌಷ್ಠಿಕಾಂಶದ ಅವಶ್ಯಕತೆಗಾಗಿ ರೂ.2,000 ಉತ್ತೇಜನಾ ಧನದ ಯೋಜನೆಗೆ ರೂ.15 ಕೋಟಿ.

**ವಿಜ್ಞಾನ ಮತ್ತು ತಂತ್ರಜ್ಞಾನ**

- ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠ ಸಂಸ್ಥೆಗಳನ್ನು ಸ್ಥಾಪಿಸಲು ಕಾಲೇಜು–ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಶಿಕ್ಷಣದ ಉನ್ನತೀಕರಣ, ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ ಮತ್ತು ವಸ್ತು ಸಂಗ್ರಹಾಲಯ, ಇತ್ಯಾದಿ ನೂತನ ಕಾರ್ಯಕ್ರಮಗಳಿಗೆ ರೂ.10 ಕೋಟಿ.
- ಚಿತ್ರದುರ್ಗ ಜಿಲ್ಲೆಯಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಶಾಖೆಯನ್ನು ತೆರೆಯಲು 1000 ಎಕರೆ ಜಮೀನು.

**ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ**

- ಬೆಂಗಳೂರು ಹೊರಗಡೆ ಪ್ರಮುಖ ನಗರಗಳಲ್ಲಿ ಬಯೋಟೆಕ್ ಪಾರ್ಕ್‌ಗಳ ನಿರ್ಮಾಣ. ಗುಲ್ಬರ್ಗಾ ವಿಭಾಗದಲ್ಲಿ ಐ.ಟಿ. ಪಾರ್ಕ್ ನಿರ್ಮಾಣಕ್ಕೆ ರೂ.10 ಕೋಟಿ
- ಗುಲ್ಬರ್ಗ ವಿಭಾಗದಲ್ಲಿ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗಳ ಸ್ಥಾಪನೆಗೆ ಪ್ರತಿ ಘಟಕಕ್ಕೆ ರೂ.20 ಲಕ್ಷದವರೆಗೆ ಸಹಾಯಧನ.

**ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕ್ರಮಗಳು**

- ಡಾ: ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಂತೆ ಪ್ರಾದೇಶಿಕ ಅಸಮತೋಲನಾ ನಿವಾರಣೆಗೆ 2,674 ಕೋಟಿ ರೂ. ಹಂಚಿಕೆ.
- ಉತ್ತರ ಕರ್ನಾಟಕದಲ್ಲಿ 1,000 ಹೊಸ ಹಾಲು ಉತ್ಪಾದಕರ ಸಹಕಾರ ಸಂಘಗಳ ಸ್ಥಾಪನೆಗೆ ಕ್ರಮ.
- ಗುಲ್ಬರ್ಗಾ ಮತ್ತು ಬೆಳಗಾವಿಯಲ್ಲಿ ರೂ. 10 ಕೋಟಿ ವೆಚ್ಚದಲ್ಲಿ ತಲಾ ಒಂದು ಹಾಲಿನ ಶೀತಲೀಕರಣ ಘಟಕದ ಸ್ಥಾಪನೆ.
- ಗುಲ್ಬರ್ಗದಲ್ಲಿ ಐ.ಟಿ. ಪಾರ್ಕ್ ಸ್ಥಾಪಿಸಲು ರೂ. 10 ಕೋಟಿ.

**ಉತ್ತರ ಕರ್ನಾಟಕದ ಕೈಗಾರಿಕಾಭಿವೃದ್ಧಿಗಾಗಿ ಪೂರಕ ಯೋಜನೆಗಳು**

- ಕೊಪ್ಪಳ, ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಒಟ್ಟು 10000 ಎಕರೆ ಪ್ರದೇಶದಲ್ಲಿ ಉಕ್ಕು ವಲಯ ಸ್ಥಾಪನೆ.
- ಬೆಳಗಾವಿಯ ಮಾಚೆ ಗ್ರಾಮದಲ್ಲಿ ಫೌಂಡ್ರಿ ಪಾರ್ಕ್ ಸ್ಥಾಪನೆ.
- ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್ ಪ್ರಾರಂಭ.
- ಬೀದರ್ ಜಿಲ್ಲೆ ಬಸವ ಕಲ್ಯಾಣದ ಸಮೀಪದಲ್ಲಿ ಆಟೋ ಪಾರ್ಕ್ ಸ್ಥಾಪನೆ.
- ಬೆಳಗಾವಿ ಜಿಲ್ಲೆಯ ಮಾಂಗೂರು ಗ್ರಾಮದಲ್ಲಿನ ಬೆಳ್ಳಿ ಆಭರಣ ತಯಾರಕ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ಹಾಗೂ ಮೂಲಭೂತ ಸೌಕರ್ಯ ಕಲ್ಪನೆ.

**ಕಾರ್ಮಿಕ ಕಲ್ಯಾಣ**

- ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆಗೆ ರೂ.10 ಕೋಟಿ.
- ಆಟೋ ಮತ್ತು ಟ್ಯಾಕ್ಸಿ ಚಾಲಕರಿಗಾಗಿ ವಿಮೆ ಯೋಜನೆಯನ್ನು ಜಾರಿಗೊಳಿಸಲು ರೂ.5 ಕೋಟಿ.
- ಕಾರ್ಮಿಕ ಮತ್ತು ಮಾಲೀಕರ ನಡುವಿನ ಸಂಬಂಧ ಹಾಗೂ ಕೈಗಾರಿಕಾ ಸಂಬಂಧಗಳ ಬಗ್ಗೆ ಅಧ್ಯಯನ ಮಾಡಲು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಲಂಪಲ್ಲಿ ವೆಂಕಟರಾಂ ಅಧ್ಯಯನ ಪೀಠ ಸ್ಥಾಪನೆ.

**ಕಂದಾಯ ಮತ್ತು ಮುಜರಾಯಿ ಇಲಾಖೆಗಳು**

- ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನವನ್ನು ಪ್ರತಿ ವರ್ಷವೂ ನಡೆಸಲು ಸುವರ್ಣ ವಿಧಾನ ಸೌಧದ ನಿರ್ಮಾಣಕ್ಕೆ ರೂ.100 ಕೋಟಿ.
- ಶಿಕ್ಷಣ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿಯನ್ನು ಖರೀದಿಸಲು ರಾಜ್ಯದ ಭೂಸುಧಾರಣೆ ಕಾಯ್ದೆಗೆ ತಿದ್ದುಪಡಿ.

**ಜಿಲ್ಲಾ ಕೇಂದ್ರಗಳ ಅಭಿವೃದ್ಧಿ**

- ಯಾದಗಿರಿ ಪಟ್ಟಣವನ್ನು ಜಿಲ್ಲಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ರೂ.25 ಕೋಟಿ. ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದ ಕಛೇರಿಗಳ ಸಂಕೀರ್ಣಕ್ಕಾಗಿ ರೂ.25 ಕೋಟಿ.
- ಕಾಗಿನೆಲೆ ಕ್ಷೇತ್ರದ ಅಭಿವೃದ್ಧಿಗೆ ರೂ.10 ಕೋಟಿ.
- ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನದ ಅಭಿವೃದ್ಧಿಗೆ ರೂ.5 ಕೋಟಿ.
- ಮಲೆಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ ಹಾಗೂ ಹಿಮವದ್‌ಗೋಪಾಲಸ್ವಾಮಿ ಬೆಟ್ಟಗಳ ಅಭಿವೃದ್ಧಿಗೆ ರೂ.5 ಕೋಟಿ.
- ವಿವಿಧ ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಗೆ ರೂ.10 ಕೋಟಿ.
- ಕೆಲವು ಭಾವೈಕ್ಯತಾ ಕ್ಷೇತ್ರಗಳ ಅಭಿವೃದ್ಧಿಗಾಗಿ ರೂ.10 ಕೋಟಿ.

**ಸಾರಿಗೆ**

- ಸರ್ಕಾರಿ ಸ್ವಾಮ್ಯದ ರಸ್ತೆ ಸಾರಿಗೆ ಸಂಸ್ಥೆಗಳಿಂದ ಒಟ್ಟು 4000 ನೂತನ ವಾಹನಗಳ ಖರೀದಿ. ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರೂ.100 ಕೋಟಿ.

**ಕನ್ನಡ ಮತ್ತು ಸಂಸ್ಕೃತಿ**

- ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ.5 ಕೋಟಿ.
- "ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ" ರಚನೆಗೆ ರೂ.10 ಕೋಟಿ

- ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಶೋಧನಾ ಕೇಂದ್ರವನ್ನು ತೆರೆಯಲು ಮತ್ತು ಕನ್ನಡ ನಿಘಂಟು ಯೋಜನೆಯನ್ನು ಮುಂದುವರೆಸಲು ರೂ.2 ಕೋಟಿ.
- ಕನ್ನಡದಲ್ಲಿ ಇಂಗ್ಲೀಷಿನ 'ವಿಕಿಪಿಡಿಯಾ' ಮಾದರಿಯಲ್ಲಿ ಸರ್ವವಸ್ತು ಜ್ಞಾನಕೋಶವನ್ನು ಇಂಟರ್‌ನೆಟ್‌ನಲ್ಲಿ ಅಳವಡಿಸಲು ರೂ.2 ಕೋಟಿ.
- ಕಿತ್ತೂರು ಪ್ರಾಧಿಕಾರಕ್ಕೆ ಕಾಕತಿ ಗ್ರಾಮದ ಸೇರ್ಪಡೆ ಮತ್ತು ಅಭಿವೃದ್ಧಿಗೆ ರೂ.5 ಕೋಟಿ.
- ಕನ್ನಡ ಚಿತ್ರೋದ್ಯಮದ ಅಮೃತೋತ್ಸವ ಸಂದರ್ಭದಲ್ಲಿ ಅಮೃತೋತ್ಸವ ಭವನದ ನಿರ್ಮಾಣಕ್ಕೆ ರೂ.5 ಕೋಟಿ.
- ಸ್ವಾತಂತ್ರ್ಯ ಸಂಗ್ರಾಮ ಕೇಂದ್ರಗಳ ಮತ್ತು ಸ್ಮಾರಕಗಳ ಅಭಿವೃದ್ಧಿಗೆ ರೂ.10 ಕೋಟಿ.

**ಪತ್ರಿಕಾ ಮಾಧ್ಯಮ**

- ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ಪತ್ರಿಕಾ ಭವನ / ಮಾಧ್ಯಮ ಕೇಂದ್ರದ ನಿರ್ಮಾಣಕ್ಕೆ ತಲಾ ರೂ.25 ಲಕ್ಷ.
- ನಿವೃತ್ತ ಪತ್ರಕರ್ತರು ಮಾಸಾಶನ ಪಡೆಯಲು ಇರುವ ವಾರ್ಷಿಕ ವರಮಾನದ ಮಿತಿ ರೂ. 5000 ರಿಂದ ರೂ. 50,000ಕ್ಕೆ ಹೆಚ್ಚಳ.
- 'ಯಶಸ್ವಿನಿ ಸಹಕಾರ ಆರೋಗ್ಯ ವಿಮಾ ಯೋಜನೆ' ವ್ಯಾಪ್ತಿಯಡಿಯಲ್ಲಿ ಕಾರ್ಯನಿರತ ಪತ್ರಕರ್ತರು ಮತ್ತು ನಿವೃತ್ತ ಪತ್ರಕರ್ತರು.
- ಜಿಲ್ಲಾ ಮಟ್ಟದ ಪತ್ರಕರ್ತರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೂಲಕ ಉಚಿತ ಬಸ್ ಪಾಸ್‌ಗಳನ್ನು ವಿತರಣೆ.

**ಪ್ರವಾಸೋದ್ಯಮ**

- ಪ್ರವಾಸೋದ್ಯಮ ಇಲಾಖೆಗೆ ರೂ.180 ಕೋಟಿ.
- ನಂದಿ ಬೆಟ್ಟ, ಕೆಮ್ಮಣ್ಣುಗುಂಡಿ, ಕೊಡಚಾದ್ರಿ, ಮುಂತಾದ ಗಿರಿಧಾಮಗಳ ಅಭಿವೃದ್ಧಿಗೆ ರೂ.10 ಕೋಟಿ.
- ಕಾರವಾರದ ಟಾಗೋರ್ ಬೀಚ್ ಅಭಿವೃದ್ಧಿಗೆ ರೂ.5 ಕೋಟಿ.
- ಕೃಷ್ಣರಾಜಸಾಗರದ ಬೃಂದಾವನದ ನವೀಕರಣಕ್ಕೆ ರೂ.5 ಕೋಟಿ.

**ಯುವಜನ ಸೇವೆ ಮತ್ತು ಕ್ರೀಡೆಗಳು**

- 10 ಕ್ರೀಡಾ ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ರೂ.10 ಕೋಟಿ.
- ಧಾರವಾಡ, ಗುಲ್ಬರ್ಗ, ಉಡುಪಿ ಮತ್ತು ಮೈಸೂರು ನಗರಗಳಲ್ಲಿ ಸ್ಟೇಡಿಯಂ ನವೀಕರಣ ಮತ್ತು ಟ್ರ್ಯಾಕ್ ಸ್ಥಾಪನೆಗೆ ರೂ.10 ಕೋಟಿ.

- ಕೊಡಗು ಜಿಲ್ಲೆಯಲ್ಲಿ ಹಾಕಿ ಟರ್ಫ್ ಸ್ಥಾಪನೆಗೆ ರೂ.2 ಕೋಟಿ.
- ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಅಧಿಕೃತವಾಗಿ ಭಾಗವಹಿಸಲು ಆಯ್ಕೆಯಾಗುವ ರಾಜ್ಯದ ಕ್ರೀಡಾಪಟುಗಳಿಗೆ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರೋತ್ಸಾಹ ಧನ.
- ಪೈಲ್ವಾನರಿಗೆ ನೀಡುತ್ತಿರುವ ಮಾಸಾಶನದಲ್ಲಿ ಹೆಚ್ಚಳ.

**ಆಡಳಿತ ಸುಧಾರಣೆ**

- ತಜ್ಞರನ್ನೊಳಗೊಂಡ ವೆಚ್ಚ ಸುಧಾರಣಾ ಆಯೋಗದ (Expenditure Reforms Commission) ರಚನೆ.
- ಆಡಳಿತದಲ್ಲಿ ನೂತನ ವಿಚಾರಗಳ ಪ್ರಯೋಗಗಳನ್ನು ಪ್ರೋತ್ಸಾಹಿಸಲು ರೂ.10 ಕೋಟಿಯ ಒಂದು 'ಚಾಲೆಂಜ್ ಫಂಡ್' ಸ್ಥಾಪನೆ.

**ಸರ್ಕಾರಿ ನೌಕರರ ಮನೆಬಾಡಿಗೆ ಭತ್ಯೆ ಹೆಚ್ಚಳ**

- ರಾಜ್ಯ ಸರ್ಕಾರದ ನೌಕರರ ಮನೆಬಾಡಿಗೆ ಭತ್ಯೆಯ ದರಗಳನ್ನು 'ಎ' ವರ್ಗದ ನಗರಗಳಲ್ಲಿ ಶೇ. 20ಕ್ಕೆ, 'ಬಿ' ವರ್ಗದ ನಗರಗಳಲ್ಲಿ ಶೇ. 15ಕ್ಕೆ, 'ಸಿ', 'ಡಿ', ಮತ್ತು 'ಇ' ವರ್ಗದ ಸ್ಥಳಗಳಲ್ಲಿ ಕ್ರಮವಾಗಿ ಶೇ. 9, 6, ಮತ್ತು 5ಕ್ಕೆ ಹೆಚ್ಚಿಸಲಾಗುವುದು.
- ಹತ್ತು ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿರುವ ದಿನಗೂಲಿ ನೌಕರರಿಗೆ ತಿಂಗಳಿಗೆ ರೂ. 1000 ದವರೆಗೆ ಹೆಚ್ಚಿಸಲಾಗುವುದು.

**ಕಾನೂನು**

- ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನ್ಯಾಯಾಲಯಗಳ ಕಟ್ಟಡಗಳ ಅಭಿವೃದ್ಧಿಗೆ ರೂ.50 ಕೋಟಿ.
- ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ರೂ.10 ಕೋಟಿ.
- ವಕೀಲರ ಸಂಘದ ಕಲ್ಯಾಣ ನಿಧಿಗೆ ರೂ.1 ಕೋಟಿ ಸಹಾಯಧನ.

**ತೆರಿಗೆ ಪ್ರಸ್ತಾವನೆಗಳು**

- 2008–09ನೇ ಸಾಲಿನಲ್ಲಿ ತೆರಿಗೆ ವರಮಾನದಲ್ಲಿ ಶೇ. 10.7ರ ವೃದ್ಧಿ

**ವಾಣಿಜ್ಯ ತೆರಿಗೆಗಳು**

- 2009–10 ಸಾಲಿನಲ್ಲಿ ವಾಣಿಜ್ಯ ತೆರಿಗೆಗಳಿಂದ ರೂ. 20125 ಕೋಟಿಗಳ ಸಂಗ್ರಹಣೆ ಅಂದಾಜು

**ಮೌಲ್ಯವರ್ಧಿತ ತೆರಿಗೆ**

- ಆಹಾರಧಾನ್ಯಗಳು ಮತ್ತು ಬೇಳೆಗಳ ಮೇಲೆ ಮತ್ತೊಂದು ವರ್ಷ ತೆರಿಗೆ ವಿನಾಯಿತಿ
- ಹುಣಸೆಹಣ್ಣು ಮತ್ತು ಸೀಗೆಕಾಯಿಗಳ ಮೇಲಿನ ತೆರಿಗೆ ಶೇ. 2ಕ್ಕೆ ಇಳಿತ
- ತೆಂಗಿನಕಾಯಿ, ಒಣಕೊಬ್ಬರಿ ಮತ್ತು ಕೊಬ್ಬರಿ ಒಣಪುಡಿಯ ಮೇಲಿನ ತೆರಿಗೆ ಶೇ.2ಕ್ಕೆ ಇಳಿತ
- ಅಡಿಕೆ ಮೇಲಿನ ತೆರಿಗೆ ಶೇ. 2ಕ್ಕೆ ಇಳಿತ
- ಬಜೆ ಮೇಲೆ ತೆರಿಗೆ ವಿನಾಯಿತಿ
- ರೂ. 100 ಗಳ ವರೆಗಿನ ಪಾದರಕ್ಷೆಗಳ ಮೇಲೆ ತೆರಿಗೆ ವಿನಾಯಿತಿ
- ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟಮೆಂಟ್ ಮೂಲಕ ಮಾರಾಟವಾಗುವ ಮತ್ತಷ್ಟು ಸರಕುಗಳ ಮೇಲೆ ಶೇ. 4ರ ತೆರಿಗೆ ವಿನಾಯಿತಿ
- ಟೈರ್ ರಿಟ್ರೇಡಿಂಗ್‌ನಲ್ಲಿ ಉಪಯೋಗಿಸುವ ಎಲ್ಲಾ ತರಹದ ಟ್ರೆಡ್ ರಬ್ಬರ್ ಮೇಲೆ ಶೇ.4ರ ತೆರಿಗೆ

**ಮಾರಾಟ ತೆರಿಗೆ**

- ಮೀನುಗಾರರಿಗೆ ಮಾರಾಟ ಮಾಡುವ 75000 ಕಿಲೋ ಲೀಟರುಗಳ ಡೀಸಲ್ ಮೇಲೆ ತೆರಿಗೆ ವಿನಾಯಿತಿ

**ವಿಲಾಸ ತೆರಿಗೆ**

- ತೆರಿಗೆ ವಿನಾಯಿತಿ ಮಿತಿಯನ್ನು ರೂ. 499ಕ್ಕೆ ಏರಿಕೆ
- ವಾಸ್ತವಿಕ ಬಾಡಿಗೆ ಮೇಲೆ ತೆರಿಗೆ
- ತೆರಿಗೆ ದರಗಳ ಮಾರ್ಪಾಡು
- ರೂ. 500 ರಿಂದ ರೂ. 1000 ವರೆಗಿನ ಕೊಠಡಿ ಬಾಡಿಗೆಯ ಮೇಲೆ ಶೇ. 4
- ರೂ. 1000 ರಿಂದ ರೂ. 2000 ವರೆಗಿನ ಕೊಠಡಿ ಬಾಡಿಗೆಯ ಮೇಲೆ ಶೇ. 6
- ರೂ. 2000 ಕ್ಕಿಂತ ಹೆಚ್ಚಿನ ಕೊಠಡಿ ಬಾಡಿಗೆಯ ಮೇಲೆ ಶೇ. 10
- ಕಲ್ಯಾಣ ಮಂಟಪಗಳ ಮೇಲಿನ ತೆರಿಗೆ ಶೇ. 10ಕ್ಕೆ ಇಳಿತ
- ಪ್ರದರ್ಶನ ಹಾಲ್ ಮೇಲಿನ ತೆರಿಗೆ ಶೇ. 10ಕ್ಕೆ ಇಳಿತ

**ವೃತ್ತಿ ತೆರಿಗೆ**

- ರೂ. 10000 ವರೆಗಿನ ಮಾಸಿಕ ವೇತನ ಪಡೆಯುವ ವ್ಯಕ್ತಿಗಳಿಗೆ ತೆರಿಗೆ ವಿನಾಯಿತಿ
- 12ನೇ ತರಗತಿವರೆಗಿನ ಶಾಲಾ ಕಾಲೇಜುಗಳ ಶಾಖೆಗಳಿಗೆ ತೆರಿಗೆ ವಿನಾಯಿತಿ

**ಮನೋರಂಜನಾ ತೆರಿಗೆ**

- ಖಾಸಗಿ ಮಾಲೀಕತ್ವದ ಕ್ರೀಡೆಗಳ ಮೇಲೆ ಶೇ. 10ರ ತೆರಿಗೆ
- ಚಲನಚಿತ್ರಗಳ ಮೇಲಿನ ತೆರಿಗೆ ಶೇ. 30ಕ್ಕೆ ಇಳಿತ

**ರಾಜ್ಯ ಅಬಕಾರಿ**

- 2008–09ನೇ ತೆರಿಗೆ ಸಂಗ್ರಹಣೆ ರೂ. 5627 ಕೋಟಿಗಳ ಗುರಿ ಮುಟ್ಟುವ ಅಂದಾಜು
- 2009–10ನೇ ಸಾಲಿಗೆ ಸಂಗ್ರಹಣೆ ಅಂದಾಜು ರೂ. 6565 ಕೋಟಿಗಳು

**ಮುದ್ರಾಂಕ ಮತ್ತು ನೋಂದಣಿ**

- 2008–09ನೇ ತೆರಿಗೆ ಸಂಗ್ರಹಣೆ ಅಂದಾಜು ರೂ. 3318 ಕೋಟಿ
- ಆಸ್ತಿಗಳ ವರ್ಗಾವಣೆ ಮೇಲಿನ ಮುದ್ರಾಂಕ ಶುಲ್ಕದಲ್ಲಿ ಶೇ. 7.5ರಿಂದ ಶೇ. 6ಕ್ಕೆ ಇಳಿತ– ರೂ. 400 ಕೋಟಿಗಳ ರಾಜಸ್ವ ನಷ್ಟ
- ಮುದ್ರಾಂಕ ಶುಲ್ಕಗಳ ಪರಿಷ್ಕರಣೆ
- ಸ್ಥಿರಾಸ್ತಿಗಳ ವರ್ಗಾವಣೆ ಒಳಗೊಂಡಿರದ ಒಪ್ಪಂದಗಳ ಮೇಲೆ ಒಪ್ಪಂದ ಮೊತ್ತದ ಶೇ. 0.25
- ಜಂಟಿ ಅಭಿವೃದ್ಧಿ ಒಪ್ಪಂದದ ಮೇಲೆ ಶೇ. 1
- ಆರ್ಬಿಟ್ರೇಷನ್ ಅವಾರ್ಡ ಮೇಲೆ ಶೇ. 6
- ರೂ. 10,000ಗಳ ಮಿತಿಯೊಂದಿಗೆ ಋಣಭಾರ ವರ್ಗಾವಣೆಯ ಮೇಲೆ ಶೇ. 0.5
- ನಕಲು ನೋಂದಣಿಯ ಮೇಲೆ ರೂ. 500
- ಸ್ಥಿರಾಸ್ತಿಗಳ ಲೀಸ್ ಮೇಲೆ ಶೇ. 1 ರಿಂದ ಶೇ. 6
- ಡೆವಲಪರ್‌ಗಳಿಗೆ ನೀಡುವ ಸಾಮಾನ್ಯ ಅಧಿಕಾರಪತ್ರದ ಮೇಲೆ ಶೇ. 1 ಮತ್ತು ಇತರೆ ಪ್ರಕರಣಗಳಲ್ಲಿ ರೂ. 200
- ಬಿಡುಗಡೆ ಮೂಲಕ ಆಸ್ತಿ ವರ್ಗಾವಣೆ ಮೇಲೆ ಶೇ. 5

**ಮೋಟಾರು ವಾಹನ ತೆರಿಗೆ**

- 2009–10ಕ್ಕೆ ನಿರೀಕ್ಷಿತ ಸಂಗ್ರಹಣೆ ರೂ. 2063 ಕೋಟಿಗಳು
- ವಿದ್ಯುತ್ ಮೋಟಾರ್ ವಾಹನಗಳ ಮೇಲಿನ ಜೀವಾವಧಿ ತೆರಿಗೆ ಶೇ. 4ಕ್ಕೆ ಇಳಿತ

* * * * *